ದೇವರು ವರ ಕೊಟ್ಟರೂ, ಪೂಜಾರಿ ವರ ಕೊಡಲಿಲ್ಲ ಎನ್ನುವಂತೆ, ನಮ್ಮ ಸರ್ಕಾರ ಏಕೋ ಉದಾಸೀನ ಮಾಡಿ, ಮಹಿಳೆಯರಿಗೆ ಹಾಸ್ಟೆಲ್ ಕಟ್ಟಿಲ್ಲ. ನಿಮಗೆ ಏನು ಕಷ್ಟ, ನಿಮಗೆ ದುಡ್ಡಿಲ್ಲದೆ ಕೇಂದ್ರ ಸರ್ಕಾರದವರು ಕೊಡುತ್ತೇನೆಂದು ಹೇಳಿದ್ದಾರಲ್ಲಾ. ದುಡ್ಡು ಕೊಟ್ಟರೂ ಕಟ್ಟುವುದಕ್ಕೆ ನಿಮಗೆ ಆಗುವುದಿಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ತಮಿಳುನಾಡಿನಲ್ಲಿ ಮಹಿಳೆಯರಿಗೆ ಎಲ್ಲಾ ರೀತಿ ಸೌಕರ್ಯ ಕೊಟ್ಟಿದ್ದಾರೆ ಎಂದು ಹೇಳಿದರೆ, ಅಲ್ಲಿ ಮಹಿಳೆಯರು ಮುಖ್ಯ ಮಂತ್ರಿಗಳು. ಇಲ್ಲಿ ಪುರುಷರು ಮುಖ್ಯ ಮಂತ್ರಿ, ಏನು ಮಾಡುವುದು ಹೇಳಿ.

ಅಧ್ಯಕ್ಷರು : ಅವರನ್ನು ಮುಖ್ಯಮಂತ್ರಿಯನ್ನಾಗಿ ನಾವು ಮಾಡಬೇಕು. ಇವರನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಿದರೆ ಕೆಲಸ ಎಲ್ಲಾ ಪೂರ್ಣವಾಗುತ್ತದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಹಿರಿಯ ಸದಸ್ಯರಿಯವರು ಹೆಣ್ಣು ಮಕ್ಕಳ ಬಗ್ಗೆ ನಮಗೆ ಕಾಳಜಿ ಇಲ್ಲವೆಂದು ಹೇಳಿದ್ದಾರೆ. ಅದು ಸರಿಯಲ್ಲ. ನಮ್ಮ ಸರ್ಕಾರಕ್ಕೂ ಕೂಡ ಕಾಳಜಿ ಇದೆ.

Drinking Water problem in Nelamangala

340 - Dr. M. Shankar Nayak (Nelamangala) : Will the Minister for Urban Development be pleased to state?

a) *Has it come to the notice of the Government that drinking water problem is prevailing in Nelamangala Town situtated in Bangalore Rural District.*

b) *If so, has the Government prepared a scheme and approved it ? and what is the approved amount, and what is the amount of expenditure?*

c) *When this Scheme will be complete?*

Sri. Vaijyanatha Patil (Minister for Urban Developement) :

a) Yes.

b) An estimate costing Rs. 260.00 lakhs has been approved on 28.4.94. An expenditure of Rs. 60.87 lakhs has been incurred upto August 1994.

c) Under this scheme already 7 numbers of high yielding Borewells have been drilled and while other works such as the work of GLSR, pump

house works and laying of AC pipes while under progress near Kulavanahally the surrounding farmers and Villagers have obstructed the work because the area comes under Korategere Constituency. Therefore the works are at standstill. If the farmers and Villagers allow to proceed with the work it is expected to be completed in a year's duration.

11.40 ಪಿ.ಎಂ

ಡಾ. ಎಂ. ಶಂಕರ್ ನಾಯಕ್ : ಮಾನ್ಯ ಅಧ್ಯಕ್ಷರೇ, ನೆಲಮಂಗಲ ಬೆಂಗಳೂರಿಗೆ ಹತ್ತಿರವಾಗಿರುವಂತಹ ದೊಡ್ಡ ಪಟ್ಟಣವಾಗಿದೆ. ಸುಮಾರು ಒಂದೂವರೆ- ಎರಡುವರ್ಷಗಳ ಹಿಂದೆ ಹಿಂದಿನ ಸರ್ಕಾರವಿದ್ದಾಗ 278 ಲಕ್ಷ ರೂ.ಗಳು ಕುಡಿಯುವ ನೀರಿಗಾಗಿ ಬಿಡುಗಡೆಯಾಗಿದೆ. ಅದರಲ್ಲಿ 70 ಲಕ್ಷ ರೂ.ಗಳು ಖರ್ಚಾಗಿದೆ ಎಂದು ಹೇಳಿದ್ದಾರೆ. ಆ ಕೆಲಸ ನಿಂತು ಒಂದೂವರೆ ವರ್ಷವಾಯಿತು. ಈಗ ಇರುವವರಿಗೆ ಕುಡಿಯುವ ನೀರಿನ ಬಗ್ಗೆ ಅವರು ಸೆಟಿಲೈಟ್ ಪಾಯಿಂಟ್ ಮಾಡಿ ಕುಮ್ಮನಳ್ಳಿ ಕೆರೆಯಲ್ಲಿ ಒಂದು ಪಾಯಿಂಟ್ ಮಾಡಿ, ಏಳು ಬೋರವೆಲಗಳನ್ನು ಹಾಕಿದ್ದಾರೆ. ಮತ್ತೆ ಪೈಪಗಳನ್ನು ತೆಗೆದುಕೊಂಡಿದ್ದಾರೆ, ಮತ್ತೆ 70 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ. ಆದರೆ ಇವತ್ತಿನವರೆಗೂ ಅವರು ಕೆಲಸವನ್ನು ಪ್ರಾರಂಭಿಸಿಲ್ಲ. ಅಲ್ಲಿ ರೈತರ ಅಡಚಣೆ ಇದೆ ಎಂದು ಉತ್ತರದಲ್ಲಿ ಹೇಳುತ್ತಾರೆ. ಈಗ ರೈತರ ಅಡಚಣೆಯನ್ನು ಚರ್ಚೆ ಮಾಡಿ ಬಗೆಹರಿಸಿದ್ದೇವೆ. ಆದರೂ ಕೂಡ ಅಧಿಕಾರಿಗಳು ಆ ಕಡೆ ಗಮನ ಹರಿಸುತ್ತಿಲ್ಲ, ಮತ್ತು ಕೆಲಸವೂ ಸಹ ನಡೆಯುತ್ತಿಲ್ಲ. ಮಾನ್ಯ ಮಂತ್ರಿಗಳು ಆದಷ್ಟು ಬೇಗ ಗಮನ ಹರಿಸಿ ಆದಷ್ಟು ಬೇಗನೆ ಕೆಲಸ ಮಾಡಿಸಿಕೊಡುವ ಬಗ್ಗೆ ನಮಗೆ ಏನಾದರೂ ಭರವಸೆಯನ್ನು ಕೊಡಬೇಕೆಂದು ನಾನು ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ವೈಜನಾಥ್ ಪಾಟೀಲ್ : ರೈತರ ಸಮಸ್ಯೆ ಇತ್ತು, ಅವರು ತೊಂದರೆ ಮಾಡುತ್ತಿದ್ದರು ಆದ್ದರಿಂದ ಕೆಲಸ ನಡೆಯುತ್ತಿರಲಿಲ್ಲ. ಈಗ ಬಗೆಹರಿಸಿದ್ದಾರೆ ಎಂದಿದ್ದಾರೆ, ಅದುದರಿಂದ ಬಹಳ ಬೇಗ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಆ ಕೆಲಸವನ್ನು ಮುಂದುವರಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಡಾ. ಎಂ. ಶಂಕರ್ ನಾಯಕ್ : ಅಲ್ಲಿ ಸೆಟಿಲೈಟ್ ಪಾಯಿಂಟ್ ಮಾಡಿದ್ದಾರೆ, ಆ ಪಾಯಿಂಟ್ ಬಿಟ್ಟರೆ, ಬೇರೆ ಕಡೆಯಿಂದ ನೆಲಮಂಗಲ ಟೌನ್‌ಗೆ ಕುಡಿಯುವ ನೀರನ್ನು ಹಿದಗಿಸುವ ಬಗ್ಗೆ ಯಾವುದೇ ಒಂದು ಸೌಕರ್ಯ ಇಲ್ಲದೇ ಇರುವುದರಿಂದ, ರೈತರ ಸಮಸ್ಯೆಯನ್ನು ಸರ್ಕಾರ ಮತ್ತು ನಾವು ಜೊತೆಯಲ್ಲಿ ಒಟ್ಟಿಗೆ ಬಗೆಹರಿಸುತ್ತೇವೆ. ಆದ್ದರಿಂದ ಮಾನ್ಯ ಮಂತ್ರಿಯವರು ಇದರ ಬಗ್ಗೆ ಆದಷ್ಟು ಬೇಗ ಗಮನ ಹರಿಸಿ, ಆ ಕಡೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಅಧಿಕಾರಿಗಳನ್ನು ಕರೆಯಿಸಿ, ಮತ್ತು ಶಾಸಕರನ್ನು ಬೇಕಾದರೆ ಕರೆಯಿಸಿ ಆದಷ್ಟು ಬೇಗ ಬಗೆಹರಿಸುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ನನ್ನ

ಕ್ಷೇತ್ರದಲ್ಲಿಯೂ ಇದೆ. ಇವತ್ತು ನಗರಾಭಿವೃದ್ಧಿ ಮಂತ್ರಿಗಳು, ರೈತರು ತೊಂದರೆ ಕೊಡುತ್ತಿದ್ದಾರೆ ಎನ್ನತಕ್ಕಂಥ ಈ ಒಂದು ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಮೊದಲು ರಾಮನಗರ ಮತ್ತು ಮಾಗಡಿ ಎರಡು ಸೇರಿ...

ಅಧ್ಯಕ್ಷರು : ಅದಕ್ಕೆ ಬೇರೆ ನೋಟೀಸನ್ನು ಕೊಡಬೇಕು, ನಾನು ನೆಲಮಂಗಲದ್ದು ಕೇಳುತ್ತಿರೇನೋ ಎಂದು....

ಶ್ರೀ ಹೆಚ್.ಸಿ. ಬಾಲಕೃಷ್ಣ : ನನ್ನ ಕ್ಷೇತ್ರದ್ದು ಸ್ವಲ್ಪ ಕುಡಿಯುವ ನೀರಿನ ಸಮಸ್ಯೆ ಇದೆ.

ಅಧ್ಯಕ್ಷರು : ಮಾಡುತ್ತಾರೆ ಬಿಡಿ. ನಿಮ್ಮ ಕ್ಷೇತ್ರಕ್ಕೆ ಕುಡಿಯುವ ನೀರಿಗೇನು ಸಮಸ್ಯೆ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಲ್ಲಿ ಕೂಡ ಪೈಪಗಳನ್ನೇಲ್ಲಾ ತಂದು ಹಾಕಿದ್ದಾರೆ, ಆದರೆ, ಇದರ ಬಗ್ಗೆ ಏನೂ ಕ್ರಮವನ್ನು ತೆಗದುಕೊಂಡಿಲ್ಲ.

ಕಡೂರು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ

341 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿ 1994-95ನೇ ಸಾಲಿಗೆ ಆಶ್ರಯ ಯೋಜನೆ ಅಡಿ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು ;

ಆ) ಇದುವರೆಗೂ ನಿರ್ಮಾಣವಾದ ಮನೆಗಳಿಗೆ ಹಣ ಬಿಡುಗಡೆ ಆಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಕಾರಣವೇನು, ಹಾಗೂ ಯಾವಾಗ ಹಣ ಬಿಡುಗಡೆ ಮಾಡಲಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) 600 ಮನೆಗಳು.

ಆ) 1995-96ನೇ ಸಾಲಿನಲ್ಲಿ ರೂ. 9.93 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ತರುವಾಯ ಸರ್ಕಾರ ದಿನಾಂಕ: 18-8-95 ರಂದು ಚಿಕ್ಕಮಗಳೂರು ಜಿಲ್ಲೆಗೆ ರೂ. 50.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. (ಸರ್ಕಾರಿ ಆದೇಶ ಸಂ. ವನಇ 1 ಹೆಚ್ ಎಹೆಚ್(2) 95)

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಎಂ. ಕೃಷ್ಣಮೂರ್ತಿ : 94-95ನೇ ಸಾಲಿಗೆ ಸಂಬಂಧಪಟ್ಟಂತೆ 600 ಮನೆಗಳಿಗೆ ಇದುವರೆಗೂ ಹಣ ಬಿಡುಗಡೆ ಆಗಿಲ್ಲ. ಆದರೆ ಉತ್ತರದಲ್ಲಿ 95-96ನೇ ಸಾಲಿಗೆ 9 ಲಕ್ಷ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. 94-95ನೇ ಸಾಲಿನಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಎಂಬುದನ್ನು ನಿರ್ದಿಷ್ಟವಾಗಿ ಮಾನ್ಯ ಸಚಿವರು ಹೇಳಬೇಕು.